# ಈ ವರ್ಷದ ಅಕ್ಷಯ ತೃತೀಯ!

ಅಕ್ಷಯ ತೃತೀಯ ಅಂದರೆ ವೈಶಾಖ ಮಾಸದ ಶುಕ್ಲ ಪಕ್ಷದ ಮೂರನೇ ದಿನ. ಅಂದು ಬ್ರಾಹ್ಮೀ ಮಹೂರ್ತದಲ್ಲಿ ಎದ್ದು ಮನೆಯನ್ನೆಲ್ಲಾ ಶುಚಿಗೊಳಿಸಿ ದೇವತಾ ಪೂಜೆ ಮಾಡಿ ತಮ್ಮ ಇಷ್ಟ ದೇವತೆಯ ದರ್ಶನ ಮಾಡುತ್ತಾರೆ. ಶುಭ ದಿನದ ಆಚರಣೆಗಳು ಅಕ್ಷಯವಾಗಲಿ. ಅಂದರೆ ಮಿತಿ ಇಲ್ಲದಷ್ಟು ಫಲ ನೀಡಲೆಂದು ಪ್ರಾರ್ಥನೆ ಮಾಡುವ ದಿನ. ಹಾಗೆಯೇ, ಹಲವರಲ್ಲಿ ಅಂದು ಚಿನ್ನ ಖರೀದಿಸಿದರೆ ಅದು ಅಕ್ಷಯವಾಗುತ್ತದೆ ಎಂಬ ಮನೋಭಾವ ಇದೆ. ದಾವಣಗೆರೆಯಲ್ಲಿ 2021ರ ಅಕ್ಷಯ ತೃತೀಯವನ್ನು ವಿಭಿನ್ನವಾಗಿ ಆಚರಿಸುವಂತಾಯ್ತು. ಕೋವಿಡ್ 19 ಮಹಾಮಾರಿ ಜನ್ಮತಾಳಿದ ಪರಿಣಾಮ ಕೊರೊನಾ ವಿಶ್ವದಾದ್ಯಂತ ಬೇತಾಳವಾಗಿ ಕಾಡುತ್ತಿದೆ. ಇಂತಹ ಸಂದರ್ಭದಲ್ಲಿ ಇಲ್ಲಿನ ಜನ ಅಕ್ಷಯ ತೃತೀಯ ದಿನದ ಬ್ರಾಹ್ಮೀ ಮಹೂರ್ತದಲ್ಲಿ ಎದ್ದು ಕೊರೊನಾ ಸೋಂಕಿನ ಲಸಿಕೆಯನ್ನು ಪಡೆಯಲು ಸರತಿ ಸಾಲಿನಲ್ಲಿ ನಿಂತಿದ್ದರು. ನಿಂತು ಸುಸ್ತಾಗಿ ನೆಲದಮೇಲೆ, ಚಪ್ಪಲಿ, ಬೂಟುಗಳನ್ನು ಸರತಿಗೆ ಇಟ್ಟು ಪಕ್ಕದಲ್ಲಿ ಕುಳಿತರು. ಚಿನ್ನ, ಬೆಳ್ಳಿ ನಮ್ಮ ಭಾಗ್ಯದ ಸಂಕೇತವಾಗಿದ್ದರೂ... ಇಂದಿನ ಮಹಾಮಾರಿಯ ದಿನಗಳಲ್ಲಿ 'ನಮ್ಮ ಆರೋಗ್ಯ' ಭಾಗ್ಯದ ಸಂಕೇತ ಎಂದು ಅಕ್ಷಯ ತೃತೀಯಾ ದಿನದಲ್ಲಾದರೂ ಲಸಿಕೆ ನಮಗೆ ಲಭಿಸಲಿ... ನಮ್ಮ ಆರೋಗ್ಯ ಅಕ್ಷಯವಾಗಿರಲಿ... ಆರೋಗ್ಯವೇ ಭಾಗ್ಯ ನಮ್ಮದಾಗಲಿ ಎಂದು ವಿನೂತನವಾಗಿ ಅಕ್ಷಯ ತೃತೀಯ ಆಚರಿಸಿದಂತೆ ಗೋಚರಿಸಿತು.

—ಅನುರಾಧ ಟಿ. ದಾವಣಗೆರೆ







# ಸೋಮನ ಮುಖವಾಡಧಾರಿ ಚಿಟ್ಟೆ

ಪ್ರಕೃತಿಯೆಂಬುದು ವಿಸ್ಮಯಗಳ ಒಡಲು. ಅದರಲ್ಲಿ ಸೃಷ್ಟಿಯಾಗುವ ರಂಗಿನ ವೈವಿಧ್ಯದ ಮರುಸೃಷ್ಟಿ ಮನುಷ್ಯನಿಂದ ಅಸಾಧ್ಯ. ಇದಕ್ಕೆ ಸಾಕ್ಷಿ ಒದಗಿಸಲು ನಮ್ಮ ಮನೆಗೆ ಇತ್ತೀಚೆಗೆ ಚಿಟ್ಟೆಯೊಂದು ಭೇಟಿ ನೀಡಿತ್ತು. ಸೋಮನ ಕುಣಿತಕ್ಕೆ ಹಾಕುವ ಮುಖವಾಡದಂತಹ ವಿನ್ಯಾಸ ಈ ಚಿಟ್ಟೆಗಿತ್ತು. ಬೆರಗು ಮೂಡಿಸುವ ಬಣ್ಣ ಮತ್ತು ಮುಖವನ್ನು ಹೋಲುವ ಚಿತ್ತಾರ ಹೊಂದಿದ್ದ ಈ ಅತಿಥಿಯ ಆಗಮನದಿಂದ ಮನ ನಿಜಕ್ಕೂ ಪುಳಕಗೊಂಡಿತು.

—ಎಚ್.ಎಸ್. ನವೀನಕುಮಾರ್ ಹೊಸದುರ್ಗ

# ಹಾರದ ಗಿಳಿಗಳು..!

ಈ ಬಾರಿ ಏಪ್ರಿಲ್—ಮೇ ತಿಂಗಳಲ್ಲೇ ಮಲೆನಾಡಲ್ಲಿ ನಿರಂತರ ಮಳೆ ಸುರಿದಿದೆ. ಇದರಿಂದ ಗಿಡ— ಮರ— ಬಳ್ಳಿಗಳೆಲ್ಲಾ ಬಿರಿ ಬಿಸಿಲಿನಲ್ಲೆ ಹಸಿರ ಹಂದರವನ್ನು ಹೆಣೆದಿವೆ.

ಮನೆ ಹಿತ್ತಲಲ್ಲಿದ್ದ ಶಿವನ ಪೂಜೆಗೆ ಬಳಸುವ ಬಿಳಿ ಎಕ್ಕದ (ಕ್ಯಾಲೊಟ್ರೋಪಿಸ್ ಗಿಗಂಟಿಯಾ ಸಸ್ಯ ಶಾಸ್ತ್ರದ ವೈಜ್ಞಾನಿಕ ಹೆಸರು) ಗಿಡಕ್ಕೆ ಬಳ್ಳಿಯೊಂದು ಹಬ್ಬಿತ್ತು. ಅದನ್ನು ನಾಜೂಕಾಗಿ ಬಿಡಿಸಿದಾಗ ಗಿಡದಲ್ಲಿ ಗೋಚರಿಸಿದ್ದು 'ಗಿಳಿ'ಗಳು! ಸಾಮಾನ್ಯವಾಗಿ ಪೇರಳೆ ಗಿಡದಲ್ಲಿ ಸಂಭ್ರಮ ದಿಂದ ಮಾತಾಡುವ ಗಿಳಿಗಳು ಬಿಳಿ ಎಕ್ಕದ ಗಿಡದಲ್ಲಿ ಮೌನವಾಗಿದ್ದು ಅಚ್ಚರಿ ಮೂಡಿಸಿತು! ಪರೀಕ್ಷಿಸಿ ನೋಡಿದರೆ ಅವು ಬಿಳಿ ಎಕ್ಕದ ಕಾಯಿಗಳು ಗಿಳಿರೂಪ ತಾಳಿದ್ದವು!

—ನಗರ ಗುರುದೇವ್ ಭಂಡಾರ್ಕರ್,
ಹೊಸನಗರ

